ಗೋಪಾಲನಿಗೆ ಭಾಸವಾಯಿತು.

ಬೆಳಿಗ್ಗೆ ಬೇಯಿಸಿದ ತರಕಾರಿ ಬೆರೆಸಿದ ಒಂದಷ್ಟು ಅನ್ನವಲ್ಲದೆ, ಅನಂತರ ಅವನು ಬೇರೇನೂ ತಿಂದಿರಲಿಲ್ಲ. ತಲೆಸುತ್ತು ಬರುವಂತಾಗುತ್ತಿದೆ. ಮುಂದೆ ಸಾಗುತ್ತಿರುವ ಸರಕು ತುಂಬಿದ ಹಡಗು ಒಮ್ಮೆ ಕಂಪಿಸಿತು.

'ಏನಾಯಿತು?' ಎಂದು ಕೇಳುವ ಮೊದಲೇ ಕಲ್ಲಿದ್ದಲಿನ ಗಂಟು ಬಿಚ್ಚಿ ಕಲ್ಲಿದ್ದಲಿನೊಂದಿಗೆ ಆತನೂ ಬೆಟ್ಟದಿಂದ ಜಾರಿ ಪ್ರಪಾತಕ್ಕೆ ಬಿದ್ದ.

ಸುತ್ತಲೂ ಗಾಢಕತ್ತಲೆ, ಸಮಯ ಎಷ್ಟಿರಬಹುದು? ಗುಂಡಿಯ ಆಳ ಮತ್ತು ಅಗಲ ನೋಡಿದಾಗ ಗೋಪಾಲ್ ಯಾದವನಿಗೆ ಅಚ್ಚರಿಯುಂಟಾಯಿತು. ಪಾರ್ಕ್ ಮಾಡಿರುವ ವಾಹನಗಳು ಹಿಂತಿರುಗುತ್ತಿರುವ ಸದ್ದು ಕೇಳಿಸುತ್ತಿದ್ದವು. ಸತ್ಕಾರ ಕೂಟ ಮುಗಿದು ಅತಿಥಿಗಳು ಮರಳುತ್ತಿದ್ದಾರೆ. ಸದ್ದುಗದ್ದಲಗಳೆಲ್ಲಾ ನಿಂತು ವಾಹನಗಳ ಮೊರೆತ ಮಾತ್ರ ಕೇಳಿಸುತ್ತಿದೆ.

ಗೋಪಾಲ್ ಯಾದವ್ ಗುಳಿಯ ಹಸಿ ಮಣ್ಣಿನ ಮೇಲೆ ಅಂಗಾತ ಮಲಗಿದ. ಗಾಳಿಯಲ್ಲಿ ಆಟವಾಡುತ್ತಿದ್ದ ತೆಂಗಿನ ಗರಿಗಳ ನಡುವೆಯಿಂದ ಬೆಳದಿಂಗಳ ತುಣುಕೊಂದು ಗುಂಡಿಯ ಮೇಲೆ ಬಿತ್ತು. ಗುಂಡಿಯಿಂದ ಹೊರತೆಗೆದ ಮಣ್ಣಿನ ರಾಶಿಯ ಮೇಲೆ ಕಾಲುಗಳನ್ನದುಮಿ ಸಿನಾನ್ ಹೇಳಿದ,

'ಹೋಗಯಾ, ಭಾಯ್.'

'ಹಾಜೀ...' ಗೋಪಾಲ್ ಯಾದವ್ ಹೇಳಿದ.

ಅವನು ಎದ್ದು ನಿಂತ. ಸಿನಾನ್ ಕೈಚಾಚಿದ. ಅದರಿಂದ ಹೊರಬಂದ ಕೂಡಲೇ ಎಲ್ಲಿಂದಲೋ ಬಂದ ಮೂರನಾಲ್ಕು ಮಂದಿ ದೊಡ್ಡ ಪೀಪಾಯಿಯನ್ನು ತಂದು ಗುಂಡಿಗೆ ಮಗುಚಿದರು. ಅದರೊಳಗಿನಿಂದ ಮಾಂಸದ ತುಣುಕುಗಳು, ಮೂಳೆಗಳಿರುವ ಬಿರಿಯಾನಿ ಒಂದು ಬೆಟ್ಟದಂತೆ ಗುಳಿಗೆ ಬೀಳುತ್ತಿದ್ದವು. ಗೋಪಾಲ್ ತೀವ್ರವಾದ ಎದೆಬಡಿತದೊಂದಿಗೆ ಅದನ್ನು ನೋಡಿದ. ಪುನಃ ಒಂದು ಪೀಪಾಯಿ ಬಂತು. ಹಾಗೆ ಬರುತ್ತಲೇ ಇದ್ದು, ಕೊನೆಗೆ ಅವನು ಎಣಿಸುವುದನ್ನೇ ಕೈಬಿಟ್ಟ. ಕೊನೆಗೆ ಇನ್ನೂ ತೆರೆಯದ ತಾಮ್ರದ ಪಾತ್ರೆಯೂ ಬಂತು. ತಿಂದುಳಿದ ಬಿರಿಯಾನಿಯಿಂದ ಗುಂಡಿ ತುಂಬಿತು.

'ಅದನ್ನೆಲ್ಲಾ ಗಟ್ಟಿಯಾಗಿ ತುಳಿದು ಲೆವೆಲ್ ಮಾಡು' ಹುಡುಗ ಹೇಳಿದ. ಗೋಪಾಲ್ ಯಾದವ್ ಸ್ವಲ್ಪ ಹೊತ್ತು ಮೌನವಾಗಿ ಗುಂಡಿಯ ಬದಿಯಲ್ಲಿ ಕುಳಿತುಕೊಂಡ.

'ಏಯ್ ಭಾಯ್, ತುಳಿದು ಲೆವೆಲ್ ಮಾಡು...' ಹುಡುಗ ಗುಡುಗಿದ, 'ಗಂಟೆ ಹನ್ನೊಂದಾಗುತ್ತಾ ಬಂತು...'

ಗೋಪಾಲ್ ಯಾದವ್ ಕಾಲುಗಳನ್ನೆತ್ತಿದ. ಒಳಗಿರುವುದು ಬಾಸುಮತಿ ಅಕ್ಕಿಯ ಬಿರಿಯಾನಿ.

'ತುಳಿ ಭಾಯ್' ಸಿನಾನ್ ಮತ್ತೆ ಮತ್ತೆ ಹೇಳಿದ.

ಅವನು ತುಳಿದ... ಎದೆಗೇ... ಮೊದಲೊಂದು ಅಳು ಕೇಳಿಸಿದಂತಾಯಿತು. ಕೊನೆಗೆ ಅದೊಂದು ನರಳುವಿಕೆಯಾಗಿ... ಏನೂ ಇಲ್ಲದಂತಾಯಿತು.

'ಇನ್ನು ಮಣ್ಣು ಹಾಕಿ ಮುಚ್ಚು.'

ಅಷ್ಟರಲ್ಲಿ ಅವನು ಬೆವರಿನಿಂದ ತೊಯ್ದು ಹೋಗಿದ್ದ. ಅವನ ಕಾಲ ಪಾದಗಳಿಗೆ ತುಪ್ಪ, ಮಸಾಲೆಗಳು ಮೆತ್ತಿಕೊಂಡಿದ್ದವು. ಗುದ್ದಲಿಯಿಂದ ಮಣ್ಣನ್ನು ಎಳೆಯುತ್ತಾ, ಕೆರೆಯುತ್ತಾ ಗುಂಡಿ ತುಂಬಿದ.